ರಂದು ಅಂಕೋಲ - ಗುತ್ತಿ ರಸ್ತೆವರೆಗೆ ರಾಷ್ಟ್ರೀಯ ಹೆದ್ದಾರಿ ಎಂದು ಪರಿವರ್ತನೆ ಮಾಡಲಾಗಿದೆ. ಇನ್ನೂ ಎರಡು ರಸ್ತೆಗಳನ್ನು ಇದೇ ರೀತಿ ಮಾಡಬೇಕೆಂದು ಕೇಳಿದ್ದೇವೆ. ಆಮೇಲೆ, ತುಮಕುರು - ಹೊನ್ನಾವರ ರಸ್ತೆಗಳ ಕಾಮಗಾರಿಯನ್ನು ತೆಗೆದುಕೊಂಡು ಕೆಲಸವನ್ನು ಉತ್ತಮವಾಗಿ ಮಾಡಿಕೊಡುವ ಬಗ್ಗೆ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ :- ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಿಂದ ನಮ್ಮ ಭಾಗಕ್ಕೆ ಸುಮಾರು ನಾಲ್ಕೈದು ಜನರು ತುಂಬಿಕೊಂಡ ಕಾರು ಈ ರಸ್ತೆಯಲ್ಲಿ ಹೋಗುವಂಥ ಸಂದರ್ಭದಲ್ಲಿ ಕನಿಷ್ಠ ಎರಡು ಕಡೆಯಲ್ಲಾದರೂ ಕೆಳಗೆ ಇಳಿಯಲೇಬೇಕಾದ ಪರಿಸ್ಥಿತಿ ಇದೆ. ಈ ರಸ್ತೆ ಕಾಮಗಾರಿಯನ್ನು ಪೂರ್ಣವಾಗಿ ಪಿ. ಡಬ್ಲ್ಯೂ. ಡಿ. ಇಲಾಖೆಯವರು ಮಾಡಲು ಸಾಧ್ಯವಾಗದೇ ಹೋದರೆ, ನಮ್ಮ ಮಲೆನಾಡುಅಭಿವೃದ್ಧಿ ಮಂಡಳಿಗೆ ಬಂದಿರತಕ್ಕಂಥ ಹಣದಲ್ಲಿ ಮಲೆನಾಡು ಭಾಗದಲ್ಲಿ ಮಾಡತಕ್ಕಂಥ ರಸ್ತೆ ಕಾಮಗಾರಿಗೆ ತಗಲುವ ವೆಚ್ಚದಲ್ಲಿ ಅರ್ಧದಷ್ಟು ಕೊಡುತ್ತೇವೆ. ಇನ್ನು ಉಳಿದೆ ಹಣವನ್ನು ಸರ್ಕಾರವೇ ಹಾಕಿಕೊಂಡು ಕೆಲಸ ಮಾಡಿಕೊಟ್ಟರೆ ಸ್ವಲ್ಪ ಮರ್ಯಾದೆಯಿಂದ ನಾವು ನಮ್ಮ ಕ್ಷೇತ್ರದಲ್ಲಿ ಬದುಕಬಹುದು.

ಶ್ರೀ ಸಿ. ಎಂ. ಉದಾಸಿ :- ಮಾನ್ಯ ಸದಸ್ಯರು ಹೇಳಿರುವ ಸಲಹೆ ಯೋಗ್ಯವಾಗಿದೆ. ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ರಸ್ತೆ ಕಾಮಗಾರಿಗಳಿಗೆ ಅನುಧಾನ ಕೊಡುವುದಾದರೆ ರಸ್ತೆಗಳನ್ನು ಮಾಡಿಸುವ ಕೆಲಸಗಳ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಯು. ಆರ್. ಸಭಾಪತಿ :- ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಹೆದ್ದಾರಿ ರಿಪೇರಿ ಕಾಮಗಾರಿ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನನಗೆ ತಿಳಿದ ಮಟ್ಟಿಗೆ ಡಾಂಬರಿನ ಕೊರತೆ ಇರುವುದರಿಂದ ರಸ್ತೆ ಕಾಮಗಾರಿ ಕೆಲಸ ನಿಂತು ಹೋಗಿದೆ. ಇನ್ನು ಎರಡು ತಿಂಗಳ ನಂತರ ಮಳೆ ಬರುವುದರಿಂದ ಆಗ ಡಾಂಬರನ್ನು ರಸ್ತೆಗೆ ಹಾಕುವುದಕ್ಕಾಗುವುದಿಲ್ಲ. ಆದುದರಿಂದ ತಕ್ಷಣದಲ್ಲಿ ಡಾಂಬರನ್ನು ಒದಗಿಸಿ ರಸ್ತೆ ಕಾಮಗಾರಿಗಳನ್ನು ಮಾಡಿಸುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಸಿ. ಎಂ. ಉದಾಸಿ :- ಡಾಂಬರಿನ ಕೊರತೆ ಇರುವದು ನಿಜ. ಅದರ ಬಗ್ಗೆ ಈಗಾಗಲೇ ಹಣವನ್ನು ತುಂಬಿದ್ದೇವೆ. ಮೇ ತಿಂಗಳ 15 ನೇ ತಾರೀಖಿನೊಳಗೆ ಡಾಂಬರು ಬಂದು ಎಲ್ಲಾ ಕೆಲಸವನ್ನು ಪೂರೈಸುತ್ತೇವೆ.

ನಗರದಲ್ಲಿ ಮುಚ್ಚಿರುವ ಮದರ್ ಡೈರಿ ಹಾಲಿನ ಕೇಂದ್ರಗಳು

72 (266) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ನಗರದಲ್ಲಿ ಎಷ್ಟು ಮದರ್ ಡೈರಿ ಹಾಲಿನ ಕೇಂದ್ರಗಳಿವೆ;

ಆ) ಇವುಗಳ ಪೈಕಿ ಎಷ್ಟು ಕೇಂದ್ರಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ.

ಇ) ಮುಚ್ಚಲಾಗಿರುವ ಕೇಂದ್ರಗಳನ್ನು ಪುನರಾರಂಭಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 146

ಆ) 117

ಇ) ಕರ್ನಾಟಕ ಹಾಲು ಮಹಾ ಮಂಡಳಿ ಹಾಗೂ ರಾಷ್ಟ್ರೀಯ ಹೈನು ಅಭಿವೃದ್ಧಿ ಸಂಸ್ಥೆಯ ಉನ್ನತ ತಾಂತ್ರಿಕಾಧಿಕಾರಿಗಳನ್ನೊಳಗೊಂಡ ಒಂದುಸಮಿತಿಯನ್ನು ರಚಿಸಿದ್ದು, ಅವರು ಸಲ್ಲಿಸಿರುವ ತಾತ್ಕಾಲಿಕ ವರದಿಯನ್ವಯ ಈಗಾಗಲೇ ಕೆಲವು ಬೂತುಗಳನ್ನು ಪುನರಾರಂಭಿಸಿ ಮಾಜಿ ಯೋಧರಿಗೆ ಕೊಡುವ ಯೋಜನೆ ಹಮ್ಮಿಕೊಳ್ಳಲಾಗಿದೆ. ಹಾಗೂ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಮದರ್ ಡೈರಿ ಮತ್ತು ಹಾಲಿನ ಮಾರಾಟ ಮಳಿಗೆಗಳಾಗಿ ಪರಿವರ್ತಿಸಿ ಕಹಾಮದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವ ವ್ಯವಸ್ಥೆಯನ್ನು ಸದ್ಯದಲ್ಲಿ ಕಾರ್ಯ ರೂಪಕ್ಕೆ ತರಲಾಗುವುದು.

ಶ್ರೀ ಸುರೇಶ್ ಕುಮಾರ್ :- ಸನ್ಮಾನ್ಯ ಅಧ್ಯಕ್ಷರೇ, 146 ಮದರ್ ಡೈರಿ ಹಾಲಿನ ಕೇಂದ್ರಗಳ ಪೈಕಿ 117 ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಶೇಕಡ 20 ಮದರ್ ಡೈರಿ ಕೇಂದ್ರಗಳನ್ನು ಇವತ್ತು ಮುಚ್ಚಲಾಗಿದೆ. ನನಗೆ ಗೊತ್ತಿರುವ ಪ್ರಕಾರ ಇದಕ್ಕೆ ಮುಖ್ಯವಾದ ಕಾರಣವೇನೆಂದರೆ, ಇವತ್ತು ಅನೇಕ ಮದರ್ ಡೈರಿ ಕೇಂದ್ರಗಳಲ್ಲಿ ಹಾಲಿನ ಮಾರಾಟದ ಪ್ರಮಾಣ ಕಡಿಮೆಯಾಗಿದೆ. ನಾನು ಅವರನ್ನು ಕೇಳಿದಾಗ ಎಫ್.ಆರ್.ಪಿ. ಯಾವ ರೀತಿ ಎಸ್.ಟಿ.ಡಿ. ಬೂತ್‌ಗಳನ್ನು 12, 20, 100 ಅಡಿ ಕೊಟ್ಟುಬಿಟ್ಟಿದ್ದೀವೆ . ಅದೇ ರೀತಿ ನೀವು ಎಫ್.ಆರ್.ಪಿ . ಕಂಟೀನರ್‌ಗಳನ್ನು ಕೊಟ್ಟು ಅದಕ್ಕೆ ವ್ಯಾಪಾರ ಜಾಸ್ತಿಯಾಗುತ್ತದೆಂದು ಮದರ್ ಡೇರಿನಲ್ಲಿ ಸುಮಾರು ಒಂದೂವರೆ ಎರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿದ್ದೀ ಆದರೆ ಇವತ್ತು ವ್ಯಾಪಾರ ಆಗುತ್ತಾ ಇಲ್ಲ. ಮದರ್ ಡೈರಿಗೆ ನಾವು ಹೋದರೆ ಕನಿಷ್ಠ ಅರ್ಧ ಲೀಟರ್ ಹಾಲನ್ನು ತೆಗೆದುಕೊಳ್ಳಬೇಕು. ಆದರೆ ಎಫ್. ಆರ್.ಪಿ.ಯಲ್ಲಿ ಅವರು ಒಂದು ರೂಪಾಯಿಗೆ ಕೂಡ ಹಾಲನ್ನು ಕೊಡುತ್ತಾರೆ. ಅವರು ವಿದ್ಯುತ್ ಚಾರ್ಜ್ ಕೂಡ ಕಟ್ಟುವುದಿಲ್ಲ. ಈ ದೃಷ್ಟಿಯಿಂದ ಮದರ್ ಡೈರಿ ಕೇಂದ್ರಗಳನ್ನು ಚೆನ್ನಾಗಿ ನಡೆಯುವ ರೀತಿಯಲ್ಲಿ ಮಾಡುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆಂದು ಕೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ.

ಶ್ರೀ ಬಿ. ಬಿ. ನಿಂಗಯ್ಯ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಸುಮಾರು 29 ಬೂತ್‌ಗಳನ್ನು ಮುಚ್ಚಲಾಗಿದೆ. ಏಕೆಂದರೇ, ಹ್ಯಾಂಡ್‌ಲಿಂಗ್ ಚಾರ್ಜ್ ಜಾಸ್ತಿಯಾಗುತ್ತದೆ. ಮನೆ ಮನೆಗೆ ಬಂದು ಹಾಲಿನ ಪಾಕೇಟ್‌ಗಳನ್ನು ಕೊಡುವುದರಿಂದ ಮತ್ತು ಹಾಲಿನ ಕೇಂದ್ರಕ್ಕೆ ಹೋಗಿ ಹಾಲನ್ನು ಕೊಂಡು ಕೊಂಡು ಬರುವುದು ದೂರವಾಗುತ್ತದೆಂದು, ಮತ್ತು ಹೆಚ್ಚು ಹಣ ಕೊಡಬೇಕಾಗುತ್ತದೆಂದು, ಮನೆ ಬಾಗಿಲಿಗೆ ಬರುವ ಹಾಲನ್ನು ಕೊಂಡು ಕೊಳ್ಳುತ್ತಾರೆ. ಹ್ಯಾಂಡ್ಲಿಂಗ್ ಚಾರ್ಜ್ ಆಗುವುದರಿಂದ ಬೂತ್‌ಗಳಲ್ಲಿ ಲೆಕ್ಕಾಚಾರ ಸರಿಯಾಗುವುದಿಲ್ಲವೆಂದು ಬೂತ್‌ಗಳನ್ನು ಮುಚ್ಚಲಾಗಿದೆ. ಬಹಳ ಕಡೆಯಿಂದ ಒತ್ತಡ ಬಂದಿರುವುದರಿಂದ ಎನ್. ಡಿ. ಡಿ. ಬಿ. ಮತ್ತು ಕೆ. ಎಂ. ಎಫ್ ಉನ್ನತ ಮಟ್ಟದ ಅಧಿಕಾರಿಗಳಿಂದ ಒಂದು ಸಮಿತಿಯನ್ನು ಮಾಡಿ, ಅದನ್ನು ವಿಚಾರಣೆ ಮಾಡಿ ಎಲ್ಲಿ ಅಗತ್ಯತೆ ಇದೆ, ಅಲ್ಲಿ ಪ್ರಾರಂಭ ಮಾಡಿ ಕೆಲವೊಂದು ಬೂತ್‌ಗಳನ್ನು ಮಾಜಿ ಯೋಧರಿಗೆ ಕೊಡಬೇಕೆಂದು ಯೋಚನೆ ಮಾಡಿದ್ದೇವೆ. ಪುನ: ಅಗತ್ಯ ಬಿದ್ದಲ್ಲಿ ಅವುಗಳಿಗೆ ಸಂಬಂಧಪಟ್ಟ ವರದಿಯನ್ನು ನಾನು ಕೊಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ :- ನಾನು ಹಾಲಿನ ಪ್ಯಾಕೇಟ್ ಬಗ್ಗೆ ಕೇಳಿಲ್ಲ. ಎಫ್.ಆರ್.ಪಿ. ಎಂದು ಕಂಟೀನರ್ ಏನು ಕೊಟ್ಟಿದ್ದೀರಾ, ಅದಕ್ಕೆ ಎಲೆಕ್ಟ್ರಿಸಿಟಿ ಇಲ್ಲ ಅವರು ಜನರು ಬಂದು ಬಂದಾಗಲೆಲ್ಲಾ ಹಾಲನ್ನು ಕೊಡುತ್ತಾರೆ. ಇದನ್ನು ನೀವು ಕೊಡುವಾಗ, ಮದರ್ ಡೈರಿಯಿಂದ ಕನಿಷ್ಠ ಪಕ್ಷ ಸ್ವಲ್ಪ ದೂರವಾದರೂ ಇರಬೇಕೆಂದು ನಿಯಮಗಳನ್ನು ಅನುಸರಿಸಿದ್ದರೆ, ಮದರ್ ಡೈರಿಗಳು ಈ ತರಹ: ದುಸ್ಥಿತಿಗೆ ಬರುತ್ತಾ ಇರಲಿಲ್ಲ. ಬೇಕಾದಂಥ ರೀತಿಯಲ್ಲಿ ಆ ಎಫ್. ಆರ್. ಪಿ. ಕಂಟೀನರ್‌ಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಬಿ. ನಿಂಗಯ್ಯ :- ಇದರ ಬಗ್ಗೆ ವಿಚಾರಣೆ ಮಾಡಿ ನೀವು ಹೇಳಿದಂತೆ ನಿಜಕ್ಕೂ ತೊಂದರೆಯಾಗುತ್ತಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸ್ವಲ್ಪ ವ್ಯತ್ಯಾಸ ಮಾಡಿ ಹೇಳಿದರೆಂದು ನನಗೆ ಅನಿಸುತ್ತದೆ. ಪ್ಯಾಕಿಂಗ್ ಕಾಸ್ಟ್ ಉಳಿಯಬೇಕು. ಹೋಮೋಜಿಸೈಜ್ಡ್ ಮಿಲ್ಕ್ ಕೊಡಬೇಕೆಂದು ಮಾಡಿದ್ದು ಬಲ್ಕ್ ಪೆಂಡಿಂಗ್ ಬೂತ್‌ಗಳನ್ನು. ಗ್ರಾಹಕನಿಗೆ ಕಡಿಮೆ ಹಣದಲ್ಲಿ ಕನಿಷ್ಠ ಪಕ್ಷ 50 ಪೈಸೆಯಿಂದ 1.00 ರೂ. ಸಿಗಬೇಕೆಂದು ಮಾಡಿದ್ದು. ಶೇಕಡ 60 ಪರ್ಸೆಂಟ್ ಬೂತ್‌ಗಳಲ್ಲಿ ನೀವು ತೊಳೆಯುವುದಕ್ಕೆ ಬಿಡುವ ನೀರನ್ನು ಹಾಲಿನಿನೊಳಗೆ ಬಿಟ್ಟು ಕೊಡುವುದರಿಂದ ಅಲ್ಲಿ ಯಾರೂ ಹಾಲು ತೆಗೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಈವರೆಗೆ 300 ಬಲ್ಕ್ ಪೆಂಡಿಂಗ್ ಬೂತ್‌ಗಳು ಆಗಿ ಪ್ಯಾಕೇಟ್ ಮಿಲ್ಕ್‌ನ್ನು ರೆಡ್ಯೂಸ್ ಮಾಡಬೇಕಾಗಿತ್ತು ನೀವು ಸೇಲ್ಸ್‌ನ್ನು, ಮದರ್ ಡೇರಿಯ ಕಾನ್ಸೆಫ್ಟ್ ಅದು ಆಗಿತ್ತು. ಅದಕ್ಕೆ ವಿರುದ್ಧವಾಗಿ ಇವತ್ತು ಕೆ. ಎಂ. ಎಫ್. ಕೆಲಸವನ್ನು ಮಾಡುತ್ತಿದೆ, ತಾವು ಇದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ? ಮದರ್ ಡೈರಿಗಳಲ್ಲಿ ಮುಚ್ಚಿ, ಬಲ್ಕ್ ಪೆಂಡಿಂಗ್‌ಗಳನ್ನು ಮುಚ್ಚಿಸಿ ಬಿಟ್ಟು ಪ್ಯಾಕೇಟ್ ಜಾಸ್ತಿ ಮಾಡುವುದು. ಎಫ್.ಆರ್.ಪಿ. ಇರುವ ಕಡೆ ಕೊಡುತ್ತೀರಾ? ಅವನು ಹಾಲು ಬಿಟ್ಟು ಕೊಡುತ್ತಾನೆ. ಅದಕ್ಕೆ ಕ್ವಾಲಿಟಿ ಕಂಟ್ರೋಲ್ ಇಲ್ಲ. ನಿಮ್ಮ ವಿಶ್ವೇಶ್ವರಯ್ಯ ಬಿಲ್ಡಿಂಗ್‌ದಲ್ಲಿ ಇರುವವರು ಯಾರೂ ಬಂದು ಇದನ್ನು ನೋಡಲಿಲ್ಲ. ಬಲ್ಕ್ ಪೆಂಡಿಂಗ್ ಬೂತ್ ಇದು ಒಂದು ಒಳ್ಳೆಯ ವ್ಯವಸ್ಥೆ ಇದೆ. ಇವರು ಮತ್ತು ತೋಟಗಾರಿಕೆ ಇಲಾಖೆಯವರು ಒಂದೇ ಕಡೆ ವ್ಯಾಪಾರ ಮಾಡಬೇಕು. ಹಾಲು ಮತ್ತು ಹಣ್ಣು ಒಂದೇ ಕಡೆ ಸಿಗಬೇಕೆಂದು ಪ್ರಮುಖವಾದ ಸ್ಥಳದಲ್ಲಿ ತೆಗೆದುಕೊಂಡಿದ್ದು, ಇವತ್ತು ಅದು ದುರುಪಯೋಗವಾಗುತ್ತಿದೆ. ಇವತ್ತು ಇವರು ಮಾಜಿ ಯೋಧರಿಗೆ ಕೊಡುತ್ತೇವೆಂದು ಹೇಳುತ್ತಿದ್ದಾರೆ, ಅಲ್ಲಿ ಯಾರೂ ಇವತ್ತು ಮಾಜಿ ಯೋಧರು ವ್ಯಾಪಾರ ಮಾಡುತ್ತಿಲ್ಲ. ಬೇನಾಮಿಯಾಗಿ ಎಜೆಂಟರುಗಳನ್ನು ನೇಮಕ ಮಾಡಿರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಂಡು ಬಲ್ಕ್ ಪೆಂಡಿಂಗ್ ಬೂತ್‌ಗಳನ್ನು ಬಲಪಡಿಸುತ್ತೀರಾ? ಇವತ್ತು ಕನಿಷ್ಠ ಪಕ್ಷ 200-250 ಬಲ್ಕ್ ಪೆಂಡಿಂಗ್ ಬೂತ್‌ಗಳು ಬೆಂಗಳೂರು ನಗರದಲ್ಲಿ ಕೆಲಸ ಮಾಡುವುದಕ್ಕೆ ಶಕ್ತಿ ಇದೆಯಾ ಎಂದು ಅವರ ಜೊತೆ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಬಿ. ಬಿ. ನಿಂಗಯ್ಯ :- ಅಧ್ಯಕ್ಷರೇ, ಅವರು ಹೇಳಿದ ಹಾಗೆ ನಾವು ಇನ್ನುವರೆಗೆ ಮಾಜಿ ಯೋಧರಿಗೆ ಕೊಟ್ಟಿರುವುದಿಲ್ಲ, ಕೊಡಬೇಕೆಂದು ಯೋಜನೆ ಇದೆ. ಇನ್ನು ಹೆಚ್ಚಿನ ಮಟ್ಟದಲ್ಲಿ ಮಾಡುವುದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.